# ಪ್ರಸ್ತಾವನೆ

**ಡಾ. ಸಿ. ಸೋಮಶೇಖರ,** ಐಎಎಸ್ (ನಿ)
ಅಧ್ಯಕ್ಷರು
ಡಾ. ಸಿ. ಸೋಮಶೇಖರ – ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ

ಸುಮಾರು ನಾಲ್ಕು ದಶಕಗಳ ಕಾಲ ಸರ್ಕಾರದ ವಿವಿಧ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ನನಗೆ ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಭಿರುಚಿ ಬಾಲ್ಯದಿಂದಲೇ ಮೂಡಿಬಂದಿದ್ದು ನನ್ನ ಬದುಕಿನ ಸೌಭಾಗ್ಯವೇ ಎಂದು ಭಾವಿಸಿರುತ್ತೇನೆ. ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ, ಸಂಸ್ಕೃತಿ, ಕಲೆಗಳ ಸೇವಾದೀಕ್ಷೆಯನ್ನು ಪಡೆದುಕೊಂಡಿದ್ದ ನನಗೆ ನನ್ನ ಆಡಳಿತಾತ್ಮಕ ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ್ದು ಈ ಸಾಹಿತ್ಯಿಕ ಚಿಂತನೆಯ ಅನುಭಾವದ ಮೂಸೆಯಲ್ಲಿ ಮೂಡಿಬಂದ ಮಾನವೀಯ ಸಂವೇದನೆಯೇ ಎಂದರೆ ಅತಿಶಯೋಕ್ತಿಯಲ್ಲ. ವಿಶೇಷವಾಗಿ ಕನ್ನಡ ಸಾಹಿತ್ಯ ಅದರಲ್ಲಿಯೂ ವಿಶೇಷವಾಗಿ ವಚನ ಸಾಹಿತ್ಯ ನನ್ನ ಆಡಳಿತ ಕ್ಷೇತ್ರದ ಕಾರ್ಯ ನಿರ್ವಹಣೆಯಲ್ಲಿ ದಾರಿದೀಪವಾಗಿ ಕೈಹಿಡಿದು ನನ್ನ ಆಡಳಿತ ಬದುಕು ಯಶಸ್ವಿಯಾಗಲು ಮೂಲ ಪ್ರೇರಣೆಯಾಯಿತು ಎಂಬುದು ಸತ್ಯ.

ನನ್ನ ಆಡಳಿತದ ಅವಧಿಯಲ್ಲಿಯೇ ಹಲವಾರು ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ನನಗೆ ನಿವೃತ್ತಿಯ ನಂತರ ಸಂಪೂರ್ಣವಾಗಿ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂಬ ಬಯಕೆಯು ಸಹಜವಾಗಿ ಚಿಗುರೊಡೆಯಿತು. ಬಸವ ವೇದಿಕೆಯ ಸಂಸ್ಥಾಪಕ ಅಧ್ಯಕ್ಷನಾಗಿ ನಾಡು ಮತ್ತು ರಾಷ್ಟ್ರದಲ್ಲಿ ಸಮಾಜಮುಖಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಹತ್ತಾರು ಹಿರಿಯ ಚೇತನಗಳಿಗೆ ಬಸವಶ್ರೀ ಮತ್ತು ವಚನಸಾಹಿತ್ಯಶ್ರೀ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸುಯೋಗವು ಒದಗಿ ಬಂದದ್ದು ನನ್ನ ಭಾಗ್ಯವೇ ಸರಿ. ಇಂದು ಬಸವ ವೇದಿಕೆ ನಾಡಿನಾದ್ಯಂತ ಬಸವ ತತ್ವ ವಿಚಾರಗಳ ಪ್ರಚಾರವನ್ನು ಕೈಗೊಳ್ಳುವ ಮೂಲಕ ವಚನ ಸಾಹಿತ್ಯವನ್ನು ನಾಡಿಗೆ ಪರಿಚಯಿಸುತ್ತಿರುವ ಒಂದು ಉನ್ನತ ಕ್ರಿಯಾಶೀಲ ಸಂಸ್ಥೆಯಾಗಿದೆ. ಹೀಗೆ ಇನ್ನೂ ಹಲವಾರು ಸಂಘ ಸಂಸ್ಥೆಗಳೊಂದಿಗೆ ನನಗಿರುವ ಸಂಬಂಧಗಳು ನನ್ನನ್ನು ಹೆಚ್ಚು ಸಮಾಜಮುಖಿಯಾಗುವಂತೆ ಮಾಡಿವೆ. ವಚನಗಳಲ್ಲಿ ಸಾಮಾಜಿಕ ಚಿಂತನೆ ಎಂಬ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಿಲಿಟ್ ಪಡೆದ ನನಗೆ ಬಸವಾದಿ ಶರಣರ ವಿಚಾರಧಾರೆ ನನ್ನ ಬದುಕಿಗೆ ಒಂದು ಮಾನವೀಯ ಸ್ಪರ್ಶ ತಂದುಕೊಟ್ಟಿದೆ.

ನನ್ನೆಲ್ಲ ಕ್ರಿಯಾತ್ಮಕ ಬದುಕಿಗೆ ದಿವ್ಯಸ್ಫೂರ್ತಿ ನೀಡಿರುವವರು ತ್ರಿವಿಧ ದಾಸೋಹಿಗಳೂ, ಶತಾಯುಷಿಗಳೂ, ಸಿದ್ಧಗಂಗೆಯ ಮಠಾಧ್ಯಕ್ಷರಾಗಿರುವ ಪರಮಪೂಜ್ಯ ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು. ಅಂತೆಯೇ ನಾಡಿನ ಹಿರಿಯ ಧಾರ್ಮಿಕ ಗುರುಗಳು ನನಗೆ ಸದಾಕಾಲ ಆಶೀರ್ವದಿಸುತ್ತಾ ಅಪಾರ ಸ್ಫೂರ್ತಿ ಹಾಗೂ ಚೈತನ್ಯವನ್ನು ತುಂಬುತ್ತಾ ಬಂದಿದ್ದಾರೆ. ಅವರ ಆಶಯ ಮತ್ತು ನಿರೀಕ್ಷೆಗಳಿಗೆ ತಕ್ಕ ಹಾಗೆ ಅವರ ದಿವ್ಯ ಮಾರ್ಗದರ್ಶನದಲ್ಲಿ ನಾಡಿನ ಸಾಹಿತ್ಯ ಸೇವಾಕ್ಷೇತ್ರದಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಬೇಕೆಂಬುದು ನಮ್ಮ ಸಂಕಲ್ಪವಾಗಿದೆ.

ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿರುವ ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ ಮತ್ತು ಈ ಸಿರಿಯನ್ನು ಜನಮಾನಸಕ್ಕೆ ಮುಟ್ಟಿಸಿರುವ ಸಂಗೀತ ಮಾಧ್ಯಮದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಸಾಧಕರನ್ನು ಪ್ರತಿವರ್ಷವೂ ಗುರುತಿಸಿ ಗೌರವಿಸಬೇಕೆಂಬ ಒಂದು ಮಹತ್ವಾಕಾಂಕ್ಷೆಯಿಂದ ಪ್ರತಿಷ್ಠಾನವೊಂದನ್ನು ಪ್ರಾರಂಭಿಸಬೇಕೆಂಬ ನಮ್ಮ ಆಶಯವು ಕಳೆದ ವರ್ಷ ಕೈಗೂಡಿದೆ.

ನನ್ನ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ನನಗೆ ಸದಾ ಸ್ಫೂರ್ತಿಯುತ ಸಹಕಾರ ನೀಡುತ್ತ ಬಂದಿರುವ ನನ್ನ ಪತ್ನಿ ಶ್ರೀಮತಿ ಸರ್ವಮಂಗಳ ಹಾಗೂ ನಾನು ಜೊತೆಗೂಡಿ ಪ್ರಾರಂಭಿಸಿರುವ ಈ ಪ್ರತಿಷ್ಠಾನದ ಆಶ್ರಯದಲ್ಲಿ ಕನ್ನಡ ನಾಡಿನ ಜಾನಪದ, ವಚನಸಾಹಿತ್ಯ ಹಾಗೂ ದಾಸಸಾಹಿತ್ಯದ ಅಡಿಯಲ್ಲಿ ವಿಶಿಷ್ಠ ಸೇವೆ ಸಲ್ಲಿಸಿರುವ ಸಾಹಿತ್ಯ ಸಾಧಕರುಗಳಿಗೆ ಪ್ರತಿವರ್ಷ **'ಸಂಸ್ಕೃತಿ ಸಂಗಮ'** ಪ್ರಶಸ್ತಿ ನೀಡಿ ಗೌರವಿಸುವುದು ಈ ಪ್ರತಿಷ್ಠಾನದ ಮೂಲ ಧ್ಯೇಯವಾಗಿದೆ. ಇದರೊಂದಿಗೆ ನಾಡಿನ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಸೃಜನಶೀಲ ಸಂಶೋಧನೆ ನಡೆಸುತ್ತಿರುವ ವಿದ್ವಾಂಸರುಗಳಿಗೆ, ಲೇಖಕರುಗಳಿಗೆ ಅವರ ಸಾಹಿತ್ಯ ಕೃತಿಗಳ ಪ್ರಕಟಣೆಗೆ ನೆರವು ನೀಡುವುದು, ಕಮ್ಮಟ ವಿಚಾರಗೋಷ್ಠಿ ಮತ್ತು ಸಮ್ಮೇಳನಗಳನ್ನು ಏರ್ಪಡಿಸುವುದು, ಸಮಾಜದಲ್ಲಿ ಸೌಹಾರ್ದಯುತವಾದ ಜಾತ್ಯಾತೀತ ಮನೋಭಾವನೆಯನ್ನು ನೆಲೆಗೊಳಿಸುವುದು ಪ್ರತಿಷ್ಠಾನದ ಮೂಲ ಉದ್ದೇಶಗಳಾಗಿವೆ.

ದಿನಾಂಕ 5-3-2015ರಂದು ನಡೆದ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭದಲ್ಲಿ ಜೀವಮಾನ ಸಾಧನೆಗಾಗಿ ವಚನ ಸಾಹಿತ್ಯದಲ್ಲಿ ಸನ್ಮಾನ್ಯ ಶ್ರೀ ಗೊ.ರು. ಚನ್ನಬಸಪ್ಪನವರಿಗೆ, ದಾಸ ಸಾಹಿತ್ಯದಲ್ಲಿ ಸನ್ಮಾನ್ಯ ಶ್ರೀ ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯ ಅವರಿಗೆ, ಜಾನಪದ ಸಾಹಿತ್ಯದಲ್ಲಿ ಸನ್ಮಾನ್ಯ ಶ್ರೀ ಡಾ. ಹೆಚ್.ಜೆ. ಲಕ್ಕಪ್ಪಗೌಡ ಅವರಿಗೆ ಮತ್ತು ಸಂಗೀತ ಕ್ಷೇತ್ರದಲ್ಲಿ ಶ್ರೀಮತಿ ಹೆಚ್.ಆರ್. ಲೀಲಾವತಿ ಅವರುಗಳಿಗೆ **'ಸಂಸ್ಕೃತಿ ಸಂಗಮ'** ಪ್ರಶಸ್ತಿಯನ್ನು ನೀಡಿ ಅಭಿಮಾನಪೂರ್ವಕವಾಗಿ ಸನ್ಮಾನಿಸಲಾಗಿದೆ. ಪ್ರತಿ ಪುರಸ್ಕಾರವು ಹತ್ತು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿರುತ್ತದೆ.

ಸದಾ ನಮಗೆ ಮಾರ್ಗದರ್ಶನ ಮತ್ತು ಆಶೀರ್ವಾದ ನೀಡುತ್ತಾ ಬಂದಿರುವ ಸುತ್ತೂರು ಶ್ರೀ ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಠದ ಅಧ್ಯಕ್ಷರಾಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ನಡೆದ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮದಲ್ಲಿ ಜ್ಞಾನಪೀಠ ಪುರಸ್ಕೃತ ಕನ್ನಡ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅವರು ಪ್ರಶಸ್ತಿ ಪ್ರದಾನ ಮಾಡಿ ಎಲ್ಲರನ್ನೂ ಅಭಿನಂದಿಸಿದ್ದಾರೆ. ಈ ವಿಶೇಷ ಸಮಾರಂಭದ ಅಧ್ಯಕ್ಷತೆಯನ್ನು ಕೇಂದ್ರ ಸರ್ಕಾರದ ಮಾಜಿ ಸಚಿವರು ಹಾಗೂ ಹಿರಿಯ ರಾಜಕೀಯ ಮುತ್ಸದ್ದಿಯಾಗಿರುವ ಶ್ರೀ ಎಂ.ವಿ. ರಾಜಶೇಖರನ್ ಅವರು ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾಗಿರುವ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ಭಾಷಣ ಮಾಡಿ ಪ್ರತಿಷ್ಠಾನಕ್ಕೆ ಶುಭ ಕೋರಿದ್ದಾರೆ. ಈ ಸಮಾರಂಭದಲ್ಲಿ ನಾಡಿನ ಸಾಹಿತ್ಯ, ಸಂಸ್ಕೃತಿ ಹಾಗೂ ಸಾರ್ವಜನಿಕ ಕ್ಷೇತ್ರದ ನೂರಾರು ಮಹನೀಯರುಗಳು, ಮಹಿಳೆಯರುಗಳು ಪಾಲ್ಗೊಂಡು ಸಮಾರಂಭದ ಮೆರುಗನ್ನು ಹೆಚ್ಚಿಸಿರುತ್ತಾರೆ.

ನಾಡಿನ ಸಾಹಿತ್ಯಿಕ ಹಾಗೂ ಸಾಮಾಜಿಕ ಬದುಕನ್ನು ಸಂಪದ್ಯುಕ್ತಗೊಳಿಸುವ ನಿಟ್ಟಿನಲ್ಲಿ ನಿರಂತರವಾಗಿ ಅಳಿಲು ಸೇವೆ ಸಲ್ಲಿಸುವ ಮಹೋದ್ದೇಶವನ್ನು ಹೊಂದಿ ದುಡಿಯುವುದೇ ನಮ್ಮ ಪ್ರತಿಷ್ಠಾನದ ದೃಢ ಸಂಕಲ್ಪವಾಗಿದ್ದು ಇದಕ್ಕಾಗಿ ಎಲ್ಲಾ ಸಾಹಿತ್ಯ ಸಂಸ್ಕೃತಿ ಅಭಿಮಾನಿ ಬಂಧುಗಳ ಉತ್ತೇಜನವನ್ನು ಸದಾ ನಿರೀಕ್ಷಿಸುತ್ತೇವೆ.

**ಎನಿತು ಜನುಮದಲಿ, ಎನಿತು ಜೀವರಿಗೆ**
**ಎನಿತು ನಾವು ಋಣಿಯೋ ?**
**ತಿಳಿದು ನೋಡಿದರೆ, ಬಾಳು ಎಂಬುದಿದು**
**ಋಣದ ರತ್ನಗಣಿಯೋ –**

ಎಂಬ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಈ ಕಾವ್ಯದ ಆಶಯದಂತೆ ಜಗತ್ತು ನಮಗೆ ನೀಡಿದ್ದನ್ನು ಜನ ಸಮುದಾಯದ ಕಲ್ಯಾಣಕ್ಕಾಗಿ ಸಮರ್ಪಿಸುವ ಮೂಲಕ ಸಮಾಜದ ಋಣವನ್ನು ತೀರಿಸಬೇಕೆಂಬ ಸಂಕಲ್ಪವು ನಮ್ಮ ಪ್ರತಿಷ್ಠಾನದ ಮೂಲ ಉದ್ದೇಶವಾಗಿದೆ ಎಂಬುದನ್ನು ವಿನಯಪೂರ್ವಕವಾಗಿ ಮತ್ತೊಮ್ಮೆ ತಮ್ಮಲ್ಲಿ ನಿವೇದಿಸಿಕೊಳ್ಳುತ್ತಾ ಈ ಪ್ರತಿಷ್ಠಾನದ ಸ್ಥಾಪನೆಗೆ ಸ್ಫೂರ್ತಿ ನೀಡಿದ ಸರ್ವರಿಗೂ ಪ್ರೀತಿಯ ಪ್ರಣಾಮಗಳನ್ನು ಸಲ್ಲಿಸುತ್ತಾ ಇಂದು ಸಂಸ್ಕೃತಿ ಸಂಗಮ ಪ್ರಶಸ್ತಿಗೆ ಭಾಜನರಾಗಿರುವ ನಾಡಿನ ಹಿರಿಯ ಶ್ರೇಷ್ಠ ಸಾಹಿತ್ಯ, ಸಂಸ್ಕೃತಿ, ಸಂಗೀತ ಸಾಧಕರುಗಳಿಗೆ ಗೌರವಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

**ಡಾ. ಸಿ. ಸೋಮಶೇಖರ,** ಐಎಎಸ್ (ನಿ)
ಪ್ರತಿಷ್ಠಾನದ ಅಧ್ಯಕ್ಷರು
ಬಸವೇಶ್ವರ ನಿಲಯ, 'ಸ್ನೇಹಶ್ರೀ', ನಂ.10, 21ನೇ ಅಡ್ಡರಸ್ತೆ, 3ನೇ ಘಟ್ಟ
4ನೇ ಹಂತ, ಬಸವೇಶ್ವರನಗರ, ಬೆಂಗಳೂರು–560 079.
ಮೊಬೈಲ್: 9880191228, ಇಮೇಲ್: drcsomasekhara9@gmail.com

ಬೆಂಗಳೂರು
ದಿನಾಂಕ: 17.07.2016

# ಶುಭಾಶೀರ್ವಾದ



ಡಾ. ಸಿ. ಸೋಮಶೇಖರ, ಐಎಎಸ್ (ನಿ) ಅವರನ್ನು ವಿದ್ಯಾರ್ಥಿ ದೆಸೆಯಿಂದಲೂ ನಾವು ಬಲ್ಲೆವು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಆ ಕಾಲದಲ್ಲಿಯೇ ಅತ್ಯುತ್ತಮ ವಾಗ್ಮಿಯಾಗಿ ಲೇಖಕರಾಗಿ, ಸಂಘಟಕರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಶ್ರೀಯುತರು ಮುಂದೆ ರಾಜ್ಯವು ಕಂಡ ಒಬ್ಬ ಅಪರೂಪದ ದಕ್ಷ ಐಎಎಸ್ ಅಧಿಕಾರಿಯಾಗಿ ರೂಪುಗೊಂಡು ತಾವು ಅಲಂಕರಿಸಿದ ಎಲ್ಲಾ ಸ್ಥಾನಗಳಿಗೂ ತಮ್ಮ ವೈಯಕ್ತಿಕ ವರ್ಚಸ್ಸಿನಿಂದ ಹೆಚ್ಚು ಗೌರವ ಬರುವಂತೆ ಮಾಡಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ನಾವು ನೇರವಾಗಿ ಗಮನಿಸಿರುವಂತೆ ತುಮಕೂರು ಜಿಲ್ಲಾಧಿಕಾರಿಯಾಗಿ ಸಾಮಾನ್ಯ ಜನತೆಯ ಆಶೋತ್ತರಗಳಿಗೆ ಅವರು ಸ್ಪಂದಿಸಿದ ರೀತಿ ಅವರಿಗೆ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟಿದೆ. ಉನ್ನತ ಅಧಿಕಾರಿಯಾದರೂ ಸಾಹಿತ್ಯ, ಸಂಸ್ಕೃತಿ, ಕಲೆಗಳ ಬಗ್ಗೆ ಅವರಿಗಿರುವ ಆಸಕ್ತಿ ಅದರಲ್ಲಿಯೂ ವಿಶೇಷವಾಗಿ ಶರಣ ಸಾಹಿತ್ಯದ ಬಗ್ಗೆ ಅವರಿಗಿರುವ ಅಪಾರವಾದ ಶ್ರದ್ಧೆಯಿಂದಾಗಿ ಅವರಲ್ಲಿ ಸರಳತೆ ಮತ್ತು ಸಜ್ಜನಿಕೆ ಸಹಜ ಪ್ರವೃತ್ತಿಯಾಗಿ ಮೂಡಿಬಂದಿದೆ.

ತಮ್ಮ ಬಹುಮುಖ ವ್ಯಕ್ತಿತ್ವದಿಂದಾಗಿ ಗಳಿಸಿಕೊಂಡ ಅನುಭವವನ್ನು ಮತ್ತೆ ಸಮಾಜಕ್ಕೆ ಧಾರೆಯೆರೆಯಬೇಕಾದ್ದು ಎಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಅವರು ಮುಂದುವರೆದು ಡಾ. ಸಿ. ಸೋಮಶೇಖರ – ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನವೊಂದನ್ನು ಸ್ಥಾಪಿಸಿರುವುದು ಸ್ತುತ್ಯರ್ಹ ಸಂಗತಿಯಾಗಿದ್ದು ಈ ನಿಟ್ಟಿನಲ್ಲಿ ಅವರು ಅಪಾರ ಕೀರ್ತಿ ಮತ್ತು ಸಾರ್ಥಕತೆ ಪಡೆದುಕೊಳ್ಳುವರು ಎಂಬುದರಲ್ಲಿ ನಮಗೆ ಯಾವುದೇ ಸಂಶಯವಿಲ್ಲ. ಅವರ ಸೇವಾ ದೀಕ್ಷೆಗೆ ಇದೊಂದು ಒಳ್ಳೆಯ ಅಡಿಪಾಯವಾಗಿರುವುದು ಸತ್ಯ.

ಕರ್ನಾಟಕ ರಾಜ್ಯದ ಒಂದು ಬಹುದೊಡ್ಡ ಔದ್ಯಮಿಕ ಕ್ಷೇತ್ರದ ಸಾಧಕರಾಗಿದ್ದ ದಿವಂಗತ ಎಂ. ನಂಜಪ್ಪನವರ ಪುತ್ರಿಯಾಗಿರುವ ಶ್ರೀಮತಿ ಎನ್. ಸರ್ವಮಂಗಳ ಅವರು ಪತಿಗೆ ತಕ್ಕ ಸತಿಯಾಗಿ ಅವರ ಎಲ್ಲಾ ಸಾಂಸ್ಕೃತಿಕ ಪ್ರಯತ್ನಗಳಿಗೆ ಸದಾ ಸ್ಫೂರ್ತಿಯನ್ನು ನೀಡುತ್ತಿದ್ದು ಅದರಲ್ಲಿಯೇ ತಮ್ಮ ಬದುಕಿನ ಧನ್ಯತೆಯನ್ನು ಕಾಣುತ್ತಿರುವ ಅವರ ಸುಸಂಸ್ಕೃತ ಅಭಿರುಚಿ ಮತ್ತು ಆಸ್ತಿಕ ಮನೋಭಾವನೆಗಳೇ ಸೋಮಶೇಖರ ಅವರ ದಾಂಪತ್ಯದ ಸಾಮರಸ್ಯಕ್ಕೆ ಹಾಗೂ ಯಶಸ್ಸಿಗೆ ಕಾರಣವಾಗಿದೆ.

ಇಬ್ಬರೂ ಸೇರಿ ಸ್ಥಾಪಿಸಿರುವ ಪ್ರತಿಷ್ಠಾನದ ಯೋಜನೆಗಳು ತುಂಬಾ ಉನ್ನತ ಮಟ್ಟದ್ದಾಗಿವೆ. ಅವರ ಎಲ್ಲ ಇಷ್ಟಾರ್ಥಗಳು ಈಡೇರಿ ಪ್ರತಿಷ್ಠಾನವು ನಾಡಿನ ಒಂದು ಬಹುದೊಡ್ಡ ಸಾಂಸ್ಕೃತಿಕ ಸೇವಾ ಸಂಸ್ಥೆಯಾಗಿ ರೂಪುಗೊಳ್ಳಲಿ ಎಂದು ಹಾರೈಸುತ್ತೇವೆ.

**ಪದ್ಮಭೂಷಣ, ಕರ್ನಾಟಕ ರತ್ನ : ಡಾ. ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳು**
ಮಠಾಧ್ಯಕ್ಷರು
ಶ್ರೀ ಸಿದ್ಧಗಂಗಾ ಮಠ, ತುಮಕೂರು

## ಡಾ. ಸಿ. ಸೋಮಶೇಖರ–ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ
## 'ಸಂಸ್ಕೃತಿ ಸಂಗಮ–2016' ಪ್ರಶಸ್ತಿ ಪ್ರದಾನ ಸಮಾರಂಭ

**17.07.2016, ಭಾನುವಾರ ಬೆಳಗ್ಗೆ 10.30ಕ್ಕೆ**



**ದಿವ್ಯ ಸಾನಿಧ್ಯ**
ಪರಮಪೂಜ್ಯ ಜಗದ್ಗುರು
**ಶ್ರೀ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು**
ತರಳಬಾಳು ಬೃಹನ್ಮಠ, ಸಿರಿಗೆರೆ



**ಸಮಾರಂಭದ ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನ**
**ಸನ್ಮಾನ್ಯ ಶ್ರೀ ಡಿ.ವಿ. ಸದಾನಂದಗೌಡರು**
ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳು ಹಾಗೂ
ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಇಲಾಖೆ ಸಚಿವರು




**'ಸಂಸ್ಕೃತಿ ಸಂಗಮ–2016' ಕಿರುಹೊತ್ತಿಗೆ ಬಿಡುಗಡೆ**
**ಸನ್ಮಾನ್ಯ ಡಾ. ಎಂ.ವಿ. ರಾಜಶೇಖರನ್‌ರವರು**
ಮಾಜಿ ಕೇಂದ್ರ ಸಚಿವರು



**ಅಧ್ಯಕ್ಷತೆ**
**ಸನ್ಮಾನ್ಯ ಡಾ. ಸಿದ್ದಲಿಂಗಯ್ಯನವರು**
ಖ್ಯಾತ ಕವಿಗಳು

### ಜಾನಪದ ಸಾಹಿತ್ಯ ಕ್ಷೇತ್ರದಲ್ಲಿನ ಜೀವಮಾನದ ಸಾಧನೆಗಾಗಿ



## ನಾಡೋಜ ಸನ್ಮಾನ್ಯ ಡಾ. ಚಂದ್ರಶೇಖರ ಕಂಬಾರ ಅವರಿಗೆ 'ಸಂಸ್ಕೃತಿ ಸಂಗಮ-2016' ಪ್ರಶಸ್ತಿ ಪ್ರದಾನ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜಾನಪದ ಸಾಹಿತ್ಯದ ಸ್ಥಾನ ಅತ್ಯಂತ ಮಹತ್ವದ್ದಾಗಿದ್ದು ಮಾನವ ಜೀವನದ ಸಮಸ್ಯೆ ಸವಾಲುಗಳನ್ನು, ಸುಖದುಃಖಗಳನ್ನು, ಮಾನವೀಯ ಮೌಲ್ಯಗಳನ್ನು ಅತ್ಯಂತ ಸರಳವಾದ ದೇಸೀಯ ರೀತಿಯಲ್ಲಿ ಅಭಿವ್ಯಕ್ತಿಗೊಳಸಿದ ಹಿರಿಮೆ ಜಾನಪದ ಸಾಹಿತ್ಯಕ್ಕೆ ಸಲ್ಲುತ್ತದೆ. ಪರಿಶುದ್ಧ ಜೀವನಾನುಭವದ ಹಿನ್ನೆಲೆಯಲ್ಲಿ ಅನಾಮಿಕರುಗಳಿಂದ ರಚಿತವಾಗಿ ನಾಲಗೆಯಿಂದ ನಾಲಗೆಗೆ ಹರಿದುಬಂದ ಜಾನಪದ ಸಾಹಿತ್ಯ ಗಂಗೆ ಇತರೆ ಎಲ್ಲ ಸಾಹಿತ್ಯ ಪ್ರಕಾರಗಳಿಗೆ ತಳಹದಿಯಾಗಿದೆ. ಜಾನಪದ ಕ್ಷೇತ್ರದ ವಿವಿಧ ಪ್ರಕಾರಗಳಲ್ಲಿನ ಸಾಹಿತ್ಯ ಸಾಧನೆಗಾಗಿ ತಮ್ಮ ಬದುಕಿನ ಎಲ್ಲ ಕ್ರಿಯಾತ್ಮಕ ಅವಧಿಯನ್ನು ಸಾರ್ಥಕಗೊಳಿಸಿಕೊಂಡ ಒಬ್ಬ ಅತ್ಯಂತ ಧೀಮಂತ ಸಾಹಿತ್ಯ ಚೇತನ ನಾಡೋಜ ಡಾ. ಚಂದ್ರಶೇಖರ ಕಂಬಾರ ಅವರು.

ಬೆಳಗಾವಿ ಜಿಲ್ಲೆಯ ಗೊಡಗೇರಿ ಗ್ರಾಮದಲ್ಲಿ 2-1-1937ರಲ್ಲಿ ಜನಿಸಿದ ಶ್ರೀ ಚಂದ್ರಶೇಖರ ಕಂಬಾರರು ಬಾಲ್ಯದಿಂದಲೇ ಜನಪದ, ಸಂಸ್ಕೃತಿ ಮತ್ತು ಮೌಲ್ಯಾಧಾರಿತ ಸಂಪ್ರದಾಯಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡವರು. ಬಡತನದ ಕಾರಣಕ್ಕಾಗಿ ಶಾಲೆ ಬಿಟ್ಟ ಸಂದರ್ಭದಲ್ಲಿ ಸಾವಳಗಿ ಮಠದ ಜಗದ್ಗುರು ಶ್ರೀ ಸಿದ್ಧರಾಮ ಸ್ವಾಮೀಜಿಯವರ ನೆರವು ಮತ್ತು ಆಶೀರ್ವಾದದಿಂದ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಗೋಕಾಕ, ಬೆಳಗಾವಿಗಳಲ್ಲಿ ಮುಗಿಸಿದ ಶ್ರೀ ಕಂಬಾರರಿಗೆ ಆದರ್ಶವಾದದ್ದು ಕುಮಾರವ್ಯಾಸ, ಬಸವಣ್ಣ, ಕುವೆಂಪು ಮತ್ತು ಗೋಪಾಲಕೃಷ್ಣ ಅಡಿಗರ ಜೊತೆಗೆ ಇಂಗ್ಲಿಷಿನ ಶೇಕ್ಸ್‌ಪಿಯರ್, ಯೀಟ್ಸ್ ಮತ್ತು ಲೋರ್ಕಾ ಅವರ ಸಾಹಿತ್ಯ. ಕನ್ನಡದಲ್ಲಿ ಸ್ನಾತಕೋತ್ತರ ಪದವಿಯ ನಂತರ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಕೆಲಕಾಲ ಪ್ರಾಧ್ಯಾಪಕರಾಗಿದ್ದ ಶ್ರೀಯುತರು ನಂತರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೇರಿ ನಿರಂತರ ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ವಿವಿಧ ಹುದ್ದೆ ಮತ್ತು ಪದವಿಗಳಲ್ಲಿ ಅತ್ಯಂತ ಸೃಜನಶೀಲವಾದ ಸೇವೆ ಸಲ್ಲಿಸಿದರು. ವಿದ್ವತ್ತಿನ ಜೊತೆಗೆ ವಿನಯಶೀಲತೆಯನ್ನು ರೂಢಿಸಿಕೊಂಡಿರುವ ಅವರ ಸರಳತೆ ಇತರರಿಗೆ ಮಾದರಿಯಾದುದು.

ಸಾಹಿತ್ಯ ಕ್ಷೇತ್ರದಲ್ಲಿ ಮಹಂತನಾಗಿ ಬೆಳೆದ ಶ್ರೀ ಕಂಬಾರರು 25 ನಾಟಕಗಳು, 11 ಕವನ ಸಂಕಲನಗಳು, 5 ಕಾದಂಬರಿಗಳು, 16 ಸಂಶೋಧನಾ ಪ್ರಕಟಣೆಗಳ ಜೊತೆಗೆ ಜಾನಪದ, ರಂಗಭೂಮಿ, ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ನೂರಾರು ಲೇಖನಗಳನ್ನು ಬರೆದಿದ್ದು ಅವೆಲ್ಲವೂ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮತ್ತು ಭಾರತೀಯ ಸಾಹಿತ್ಯಕ್ಕೆ ಅವರು ನೀಡಿದ ಶ್ರೇಷ್ಠ ಕಾಣಿಕೆಗಳಾಗಿವೆ. ಬಹುತೇಕ ಅವರ ಎಲ್ಲ ಕೃತಿಗಳೂ ರಾಜ್ಯ ಹಾಗೂ ರಾಷ್ಟ್ರದ ಅತ್ಯುಚ್ಚ ಪ್ರಶಸ್ತಿಗಳಿಗೆ ಪಾತ್ರವಾಗಿವೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ದೇವರಾಜ ಅರಸು ಪ್ರಶಸ್ತಿ, ಆಂಧ್ರಪ್ರದೇಶದ ಜೋಷುವಾ ಸಾಹಿತ್ಯ ಪುರಸ್ಕಾರ, ನಾಡೋಜ ಪ್ರಶಸ್ತಿ, ಪಂಪ ಪ್ರಶಸ್ತಿ, ಸಂತ ಕಬೀರ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶನ್ ಪ್ರಶಸ್ತಿ, ಕಲ್ಕತ್ತೆಯ ನಂದಿಕಾರ್ ಪ್ರಶಸ್ತಿ, ಕೆ.ವಿ. ಶಂಕರಗೌಡ ಪ್ರಶಸ್ತಿ, ಬಸವ ವೇದಿಕೆಯಿಂದ ಪ್ರತಿಷ್ಠಿತ ಬಸವಶ್ರೀ ಪ್ರಶಸ್ತಿ ಮುಂತಾದ ಹತ್ತಾರು ಪ್ರತಿಷ್ಠಿತ ರಾಜ್ಯ ಹಾಗೂ ರಾಷ್ಟ್ರಪ್ರಶಸ್ತಿಗಳನ್ನು ಪಡೆದುಕೊಂಡು ಕನ್ನಡ ನಾಡು-ನುಡಿಗೆ ಅಪ್ರತಿಮವಾದ ಸೇವೆ ಸಲ್ಲಿಸಿರುವ ಶ್ರೀ ಚಂದ್ರಶೇಖರ ಕಂಬಾರ ಅವರು ಭಾರತೀಯ ಸಾಹಿತ್ಯ ಕ್ಷೇತ್ರದ ಯಶೋಗಾಥೆಯ ಒಂದು ಬಹುದೊಡ್ಡ ಅಭಿನಾಮವಾಗಿರುವುದು ನಮ್ಮೆಲ್ಲರ ಸುಯೋಗವಾಗಿದೆ.

ಕನ್ನಡಿಗರ ಸ್ವಾಭಿನಮಾನ ಹಾಗು ಹೆಮ್ಮೆಯ ಸಂಕೇತವಾದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪಕ ಉಪಕುಲಪತಿಗಳಾಗಿ ಕಂಬಾರರು ವಿಶ್ವವಿದ್ಯಾಲಯದ ಸ್ಥಾಪನೆ, ವಿಸ್ತರಣಾ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ನಾಡಿನ ಚರಿತ್ರೆಯಲ್ಲೊಂದು ಅಪೂರ್ವ ದಾಖಲೆಯಾಗಿದ್ದು, ನಾಡು ನುಡಿಯ ಸಮಗ್ರ ಅಭಿವೃದ್ಧಿಯ ಬಗ್ಗೆ ಅವರಿಗಿರುವ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಆದರ್ಶ ಹಾಗು ಅಪ್ರತಿಮವಾದ ಸೇವೆಯನ್ನು ಸಲ್ಲಿಸಿರುವ ನಮ್ಮ ನಡುವಣ ಸಾಹಿತ್ಯ ಮೇರು ಶಿಖರವಾದ ನಾಡೋಜ ಡಾ. ಚಂದ್ರಶೇಖರ ಕಂಬಾರರ ಜೀವಮಾನದ ಸಾರ್ಥಕ ಸೇವೆಗಾಗಿ, ಇಂದು ಸಂಸ್ಕೃತಿ ಸಂಗಮ-2016 ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ಪ್ರಶಸ್ತಿಯನ್ನು ಸ್ವೀಕರಿಸಲು ಅವರು ಸಮ್ಮತಿಸಿರುವುದು ನಮ್ಮ ಪ್ರತಿಷ್ಠಾನದ ಸುಯೋಗವಾಗಿದೆ. ಶ್ರೀಯುತರ ಸಾಹಿತ್ಯ ಕೊಡುಗೆಗಳು ನಿರಂತರವಾಗಿ ಮುಂದುವರೆಯಲಿ ಎಂದು ಆಶಿಸುತ್ತಾ ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಆರೋಗ್ಯಾದಿ ಸೌಭಾಗ್ಯಗಳು ದೊರೆಯಲಿ ಎಂದು ಹಾರೈಸುತ್ತೇವೆ.

●

### ವಚನ ಸಾಹಿತ್ಯ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ

## ನಾಡೋಜ ಸನ್ಮಾನ್ಯ ಡಾ. ಎಂ. ಚಿದಾನಂದ ಮೂರ್ತಿಯವರಿಗೆ 'ಸಂಸ್ಕೃತಿ ಸಂಗಮ–2016' ಪ್ರಶಸ್ತಿ ಪ್ರದಾನ



ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರ ಜೀವನಾನುಭವದ ನೆಲೆಯಲ್ಲಿ ಮೂಡಿಬಂದ ಕ್ರಾಂತಿಕಾರಕ ಚಿಂತನೆಗಳನ್ನೊಳಗೊಂಡ ವಚನ ಸಾಹಿತ್ಯ, ವಿಶ್ವದ ಸಾಹಿತ್ಯ ಇತಿಹಾಸದಲ್ಲೊಂದು ಪರ್ವಕಾಲ. 'ದಯೆಯೇ ಧರ್ಮದ ಮೂಲವಯ್ಯಾ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ', 'ಸಕಲ ಜೀವಾತ್ಮರಿಗೆ ಲೇಸನು ಬಯಸುವವನೇ ಕುಲಜ' ಮುಂತಾದ ಇಡೀ ವಿಶ್ವಕ್ಕೆ ವಿಶ್ವಭ್ರಾತೃತ್ವದ ಅಡಿಪಾಯ ಹಾಕಿಕೊಟ್ಟ ವಚನ ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿರುವ ಮೇಧಾವಿಗಳ ಸಾಲಿನಲ್ಲಿ ಪ್ರಮುಖವಾದವರು  ನಾಡೋಜ ಎಂ. ಚಿದಾನಂದ ಮೂರ್ತಿ ಅವರು.

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರಿನಲ್ಲಿ 10.5.1931 ರಂದು ಜನಿಸಿ ದಾವಣಗೆರೆಯಲ್ಲಿ ಪ್ರೌಢಶಾಲೆ ಇಂಟರ್ ಮೀಡಿಯೆಟ್, ಮೈಸೂರಿನಲ್ಲಿ ಬಿ.ಎ. (ಆನರ್ಸ್) ಮುಗಿಸಿ 10.05.1953ರಲ್ಲಿ ಅಧ್ಯಾಪಕರಾಗಿ ನೇಮಕಗೊಂಡು 1957ರಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಎಂಎ. ಮುಗಿಸಿದ ಶ್ರೀಯುತರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಪ್ರೌಢ ನಿಬಂಧಕ್ಕೆ 1964ರಲ್ಲಿಯೇ ಪಿಹೆಚ್.ಡಿ. ಪಡೆದುಕೊಂಡವರು. 1967–68ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದುಕೊಂಡು ಪೋಸ್ಟ್ ಡಾಕ್ಟೊರಲ್ ಅಧ್ಯಯನ ನಡೆಸಿ ಅಮೇರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ 1979ರಲ್ಲಿ 4ನೇ ಅಂತರಾಷ್ಟ್ರೀಯ ಐತಿಹಾಸಿಕ ಭಾಷಾ ವಿಜ್ಞಾನ ಸಮ್ಮೇಳನದ ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಗೌರವಕ್ಕೆ ಪಾತ್ರರಾಗಿ, ಮುಂದೆ 1983–84ರಲ್ಲಿ ತಿರುವನಂತಪುರದ ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

1960ರ ವೇಳೆಗೆ ಮೈಸೂರು ಮಾನಸ ಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇರಿ ಮುಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಪ ಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿ 1990ರಲ್ಲಿ ಸ್ವಯಂ ನಿವೃತ್ತಿ ಪಡೆದ ಶ್ರೀಯುತರು ಹಲವಾರು ಪ್ರತಿಷ್ಠಿತ ವಿಶ್ವಕೋಶ, ಸಾಹಿತ್ಯ ಚರಿತ್ರೆ, ನಿಘಂಟು ರಚನೆಯಂಥ ಮಹತ್ಕಾರ್ಯಗಳಲ್ಲಿ

ಅನುಪಮ ಸೇವೆ ಸಲ್ಲಿಸಿದ್ದಾರೆ. ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ನಂತರ ಕನ್ನಡ ಶಕ್ತಿದೇವಿಯ ಆರಾಧಕರಾಗಿ ಕನ್ನಡ ನಾಡು-ನುಡಿ ಹೋರಾಟಗಳಲ್ಲೆಲ್ಲಾ ಮಂಚೂಣಿಯಲ್ಲಿದ್ದು ಮಹತ್ವದ ಶಕ್ತಿಯಾಗಿದ್ದಾರೆ. ಅಂದಿನಿಂದ ಇಂದಿನವರೆಗೆ ಕನ್ನಡದ ಬಗೆಗಿನ ಅವರ ನಿಷ್ಠೆ, ಪ್ರಾಮಾಣಿಕತೆ ಮತ್ತು ಕ್ರಿಯಾಶೀಲತೆಗಳು ಆದರ್ಶಪ್ರಾಯವಾಗಿದ್ದು, ಇವರ ಶಿಸ್ತುಬದ್ಧ ಅಧ್ಯಯನ ಮತ್ತು ಸರಳತೆಗಳು ಸಾಹಿತ್ಯ ಸಾಧಕರುಗಳಿಗೆ ಅನುಕರಣೀಯವಾಗಿವೆ. ಶ್ರೀಯುತರ ಆಳವಾದ ಪರಿಶ್ರಮ, ಸಂಶೋಧನೆ ಮತ್ತು ಅಧ್ಯಯನಗಳ ಹಿನ್ನೆಲೆಯಲ್ಲಿ ಇದುವರೆಗೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಕೃತಿಗಳು, ಮುನ್ನೂರೈವತ್ತಕ್ಕೂ ಹೆಚ್ಚು ಪ್ರಬಂಧಗಳು, ನಾಲ್ಕುನೂರಕ್ಕೂ ಹೆಚ್ಚು ಲೇಖನಗಳು ಅಮೂಲ್ಯ ಕೊಡುಗೆಗಳಾಗಿ ಪ್ರಕಟವಾಗಿವೆ. ಚಿಂತನೆ, ಸಂಶೋಧನೆ, ಗ್ರಂಥ ಸಂಪಾದನೆ, ವಸ್ತುನಿಷ್ಠ ವಿಚಾರ ಪ್ರತಿಪಾದನೆಗಳಿಗೆ ದೊಡ್ಡ ಹೆಸರಾಗಿರುವ ಡಾ. ಎಂ. ಚಿದಾನಂದಮೂರ್ತಿ ಅವರು ಶಾಸನ, ಜಾನಪದ, ವಚನ ಸಾಹಿತ್ಯ, ಭಾಷಾ ಶಾಸ್ತ್ರ ಮೊದಲಾದ ವಿಷಯಗಳಲ್ಲಿ ಕಳೆದ ನಾಲ್ಕೈದು ದಶಕಗಳಿಂದ ನಿರಂತರ ಅಧ್ಯಯನ ಮತ್ತು ಸಂಶೋಧನೆ ಮಾಡಿರುವ ಮಹತ್ವದ ಸಾಹಿತ್ಯ ಸಾಧಕರಾಗಿದ್ದಾರೆ.

ಶ್ರೀಯುತರ ಸಿದ್ಧಿ ಸಾಧನೆಗಳಿಗೆ, ಅರ್ಹವಾಗಿಯೇ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಗಳಾಗಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ತೀ.ನಂ.ಶ್ರೀ. ಸ್ಮಾರಕ ಬಹುಮಾನ, ಶಂಬಾ ಜೋಶಿ ಪ್ರಶಸ್ತಿ, ಬಸವ ವೇದಿಕೆಯಿಂದ ವಚನಸಾಹಿತ್ಯಶ್ರೀ ಪ್ರಶಸ್ತಿ, ಸುತ್ತೂರು ಶಿವರಾತ್ರೀಶ್ವರ ಪ್ರಶಸ್ತಿ ಒಳಗೊಂಡಂತೆ ಹತ್ತಾರು ರಾಷ್ಟ್ರೀಯ, ಅಂತರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿರುವ ಇವರಿಗೆ ವಿಶೇಷವಾಗಿ ವಚನ ಸಾಹಿತ್ಯ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ ಇಂದು ನಮ್ಮ ಸಂಸ್ಥೆಯಿಂದ ಪ್ರೀತ್ಯಭಿಮಾನಪೂರ್ವಕವಾಗಿ –'ಸಂಸ್ಕೃತಿ ಸಂಗಮ-2016' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಶ್ರೀಯುತರ ಸಾಹಿತ್ಯ ಸೇವೆ, ಸಂಶೋಧನಾ ಸೇವೆ ಇನ್ನಷ್ಟು ವ್ಯಾಪಕವಾಗಿ ಮುಂದುವರೆದು, ಅವರ ವ್ಯಕ್ತಿತ್ವ ಇನ್ನಷ್ಟು ಪ್ರಖರವಾಗಿ ನಾಡು ನುಡಿಯ ಹೋರಾಟಗಾರರಿಗೆ ಸ್ಫೂರ್ತಿ ನೀಡಲಿ ಎಂದು ಆಶಿಸುತ್ತಾ ಶ್ರೀಯುತರಿಗೂ, ಅವರ ಸಮಸ್ತ ಕುಟುಂಬ ವರ್ಗಕ್ಕೂ ಆರೋಗ್ಯಾದಿ ಸೌಭಾಗ್ಯಗಳು ದೊರೆಯಲಿ ಎಂದು ಹಾರೈಸುತ್ತೇವೆ.

## ದಾಸ ಸಾಹಿತ್ಯ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ

# ಶ್ರೀಮತಿ ಡಾ. ಟಿ.ಎನ್. ನಾಗರತ್ನ ಅವರಿಗೆ 'ಸಂಸ್ಕೃತಿ ಸಂಗಮ-2016' ಪ್ರಶಸ್ತಿ ಪ್ರದಾನ



ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದಾಸಸಾಹಿತ್ಯವು ಪ್ರಮುಖವಾಗಿ ಆತ್ಮೋನ್ನತಿಯನ್ನೇ ಪ್ರಧಾನವಾಗಿಟ್ಟುಕೊಂಡು ರಚಿತವಾದ ವಿಶಿಷ್ಟ ಸಾಹಿತ್ಯ ಪ್ರಕಾರ. ಹರಿಭಕ್ತಿ, ಆಧ್ಯಾತ್ಮ ನೀತಿಬೋಧೆ, ಸದಾಚಾರ, ಸದ್ವಿವೇಕ, ಸಮಾಜಶುದ್ಧಿಗಳ ಚಿಂತನೆಗಳನ್ನೊಳಗೊಂಡಂತೆ ತನ್ನ ಪ್ರಭಾವಪೂರ್ಣ ಸಾಹಿತ್ಯಿಕ ಮೌಲ್ಯಗಳೊಂದಿಗೆ ಪರಿಣಾಮಕಾರಿ ಗೇಯಾಂಶಗಳನ್ನು ಒಳಗೊಂಡಿರುವುದು ದಾಸಸಾಹಿತ್ಯದ ಜನಪ್ರಿಯತೆಗೆ ಸಾಕ್ಷಿಯಾಗಿದೆ. 29-5-1945ರಲ್ಲಿ ಜನಿಸಿದ ಶ್ರೀಮತಿ ಟಿ.ಎನ್. ನಾಗರತ್ನ ಅವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮೂವತ್ತೈದು ವರ್ಷಗಳ ಕಾಲ ಹರಿದಾಸ ಸಾಹಿತ್ಯ ವಿಭಾಗದ ಮುಖ್ಯಸ್ಥೆಯಾಗಿ ಸೇವೆಯನ್ನು ಸಲ್ಲಿಸಿದ್ದು, ನಿವೃತ್ತಿಯ ನಂತರ ಇದೀಗ ಪೂರ್ಣ ಪ್ರಮಾಣದಲ್ಲಿ ದಾಸಸಾಹಿತ್ಯದ ಶಾಸ್ತ್ರೀಯ ಸಂಪಾದನಾ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ನಮ್ಮ ನಡುವಿನ ಒಬ್ಬ ಆದರ್ಶ ಸಾಧಕಿಯಾಗಿದ್ದಾರೆ.

ಶಿವಮೊಗ್ಗೆಯಲ್ಲಿ ವಿದ್ಯಾಭ್ಯಾಸ ಮಾಡಿ ಪದವಿ ಪರೀಕ್ಷೆಯಲ್ಲಿ, ಐಚ್ಛಿಕ ಕನ್ನಡದಲ್ಲಿ ಚಿನ್ನದ ಪದಕ ಪಡೆದ ಶ್ರೀಮತಿಯವರು ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದು 1967ರಲ್ಲಿ ಎಂ.ಎ. ಪರೀಕ್ಷೆಯಲ್ಲೂ ಚಿನ್ನದ ಪದಕ ಪಡೆದ ಪ್ರತಿಭಾವಂತೆಯಾಗಿದ್ದು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಸಾಹಿತ್ಯದಲ್ಲಿ ಪಿ.ಹೆಚ್‌ಡಿ. ಪಡೆದ ಪ್ರಪ್ರಥಮ ಮಹಿಳೆಯಾಗಿದ್ದಾರೆ. ಸ್ನಾತಕೋತ್ತರ ಪದವಿ ತರಗತಿಗಳಿಗೆ ಗೌರವ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿರುವ ಇವರು ತಮ್ಮ ವಿದ್ವತ್ಪೂರ್ಣ ಸಾಮರ್ಥ್ಯದಿಂದ ವಿಶೇಷವಾಗಿ ಹರಿದಾಸ ಸಾಹಿತ್ಯ ಸಂಶೋಧನೆ, ವಿಶ್ಲೇಷಣೆ, ಸಂಪಾದನೆ ಮತ್ತು ಪ್ರಕಟಣೆಗಳ ಕಾರ್ಯದಲ್ಲಿ ಕರ್ನಾಟಕ ಸರ್ಕಾರದ 'ಸಮಗ್ರ ದಾಸ ಸಾಹಿತ್ಯ ಪ್ರಕಟಣಾ ಯೋಜನೆ'ಯ ಕಾರ್ಯ ನಿರ್ವಾಹಕ ಸಂಪಾದಕಿಯಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪುರಂದರ ಪೀಠದ ಸಲಹಾ ಸಮಿತಿ ಸದಸ್ಯರಾಗಿ, ರಾಜ್ಯ ಸರ್ಕಾರ ಸ್ಥಾಪಿಸಿರುವ ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರ ಮಂಡಲ ಸದಸ್ಯೆಯಾಗಿ, ಕನಕ ಸಾಹಿತ್ಯ ಅನುವಾದದ ಬೃಹದ್ಯೋಜನೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ದಾಸ ಸಾಹಿತ್ಯ ವಾಙ್ಮಯಕ್ಕೆ ಮಹತ್ತರ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ.

ದಾಸ ಸಾಹಿತ್ಯದ ಅಧ್ಯಯನ, ಪ್ರಸಾರ ಮತ್ತು ಬೋಧನೆಗಳಲ್ಲಿ ಸಮರ್ಪಣಾಭಾವದಿಂದ ತಮ್ಮನ್ನು ತೊಡಗಿಸಿಕೊಂಡು ಕಾಯಾ ವಾಚಾ ಮನಸಾ ದುಡಿಯುತ್ತಿರುವ ಶ್ರೀಮತಿಯವರು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಹರಿದಾಸ ಭಕ್ತಿಸ್ವರೂಪ, ಶ್ರೀ ಗೋಪಾಲದಾಸರ ಕೃತಿಗಳು, ಶ್ರೀ ವಾದಿರಾಜರ ಕೃತಿಗಳು, ಶ್ರೀ ಜಗನ್ನಾಥದಾಸರ ಕೃತಿಗಳು, ಶ್ರೀ ವ್ಯಾಸರಾಯರ ಕೃತಿಗಳು, ಶ್ರೀ ರಾಮದಾಸರ ಕೃತಿಗಳು, ಶ್ರೀ ಕನಕದಾಸರ ಕೀರ್ತನೆಗಳು, ಹರಪನಹಳ್ಳಿ ಭೀಮವ್ವನ ಹಾಡುಗಳು ಮೊದಲುಗೊಂಡು ಮೂವತ್ತೈದಕ್ಕೂ ಹೆಚ್ಚು ಉತ್ಕೃಷ್ಟ ಕೃತಿಗಳನ್ನು ಪ್ರಕಟಿಸಿದ್ದಾರೆ. ದಾಸಸಾಹಿತ್ಯ ಮತ್ತಿತರ ವಿಷಯಗಳ ಬಗ್ಗೆ ಆಕಾಶವಾಣಿಯಲ್ಲಿ ಮತ್ತು ಅನೇಕ ಸಮ್ಮೇಳನಗಳಲ್ಲಿ ಹಾಗೂ ಸಾರ್ವಜನಿಕವಾಗಿ ನೂರಾರು ಉಪನ್ಯಾಸಗಳನ್ನು ನೀಡಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಪರಿಶ್ರಮವಿರುವ ಶ್ರೀಮತಿಯವರು ರಚಿಸಿರುವ ಕೀರ್ತನೆಗಳ ಸಂಗ್ರಹ – 'ಸಿರಿಗಂಗಾಜನಕ ಕೀರ್ತನ ಕುಸುಮಾಂಜಲಿ' ಅಪಾರ ಜನಪ್ರಿಯತೆ ಗಳಿಸಿದ್ದು ಇವರ ಸಾಧನೆಗೆ ಅರ್ಹವಾಗಿಯೇ ಹತ್ತಾರು ಪ್ರತಿಷ್ಠಿತ ಪುರಸ್ಕಾರಗಳು ಅರಸಿ ಬಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕನ್ನಡ ವಿಶ್ವವಿದ್ಯಾಲಯದ ರಾಷ್ಟ್ರೀಯ ಗೌರವ ಸಮ್ಮಾನ, ಮಂತ್ರಾಲಯದ ರಾಘವೇಂದ್ರ ಸನ್ನಿಧಿಯಿಂದ 'ಹರಿದಾಸ ಸಾಹಿತ್ಯ ವಿದ್ವನ್ಮಣಿ' ಬಿರುದು, 'ವಿಜಯ ವಿಠಲ' ಪ್ರಶಸ್ತಿ, 'ಹೊಯ್ಸಳ' ಪ್ರಶಸ್ತಿ, 'ಮಧ್ವ–ಪುರಂದರ' ಪ್ರಶಸ್ತಿ, ಇವೆಲ್ಲವುಗಳಿಗಿಂತಲೂ ಮಿಗಿಲಾಗಿ ದಾಸಸಾಹಿತ್ಯ ಕ್ಷೇತ್ರದಲ್ಲಿ ಶ್ರೀಮತಿಯವರು ಸಲ್ಲಿಸಿರುವ ಅನನ್ಯ ಸೇವೆಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರ ಪ್ರತಿಷ್ಠಿತ 'ಕನಕಶ್ರೀ' ಪ್ರಶಸ್ತಿಯನ್ನು 2009ರಲ್ಲಿ ನೀಡಿ ಗೌರವಿಸಿದೆ.

ಶ್ರೀಮತಿಯವರು ದಾಸಸಾಹಿತ್ಯಕ್ಕೆ ಸಲ್ಲಿಸಿರುವ ಸಾಧನೆಯನ್ನು ಪರಿಗಣಿಸಿ ಇಂದು ನಮ್ಮ ಪ್ರತಿಷ್ಠಾನವು ಅವರ ಜೀವಮಾನ ಸಾಧನೆಗಾಗಿ ಅವರಿಗೆ ಮತ್ತು ಕುಟುಂಬಕ್ಕೆ ಶುಭಾಶಯಗಳನ್ನು ಕೋರುತ್ತ 'ಸಂಸ್ಕೃತಿ ಸಂಗಮ–2016' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

### ಸುಗಮ ಸಂಗೀತ ಕ್ಷೇತ್ರದಲ್ಲಿ ಜೀವಮಾನದ ಸಾಧನೆಗಾಗಿ

## ಶ್ರೀಮತಿ ರತ್ನಮಾಲಾ ಪ್ರಕಾಶ್ ಅವರಿಗೆ 'ಸಂಸ್ಕೃತಿ ಸಂಗಮ-2016' ಪ್ರಶಸ್ತಿ ಪ್ರದಾನ



ನಾಡಿನ ಪ್ರಖ್ಯಾತ ಕವಿಗಳ, ಸಂತರ, ದಾರ್ಶನಿಕರ ಕಾವ್ಯಧಾರೆಗೆ ಜನಪ್ರಿಯತೆಯನ್ನು ತಂದುಕೊಟ್ಟ ಸಂಗೀತ ಪ್ರಕಾರವೇ ಸುಗಮ ಸಂಗೀತ. ಶಾಸ್ತ್ರೀಯ ನೆಲೆಗಿಂತ ಭಾವಪೂರ್ಣ ಸಾಹಿತ್ಯಕ್ಕೇ ಒತ್ತುಕೊಟ್ಟ ಹಿರಿಮೆ ಸುಗಮ ಸಂಗೀತಕ್ಕೆ ಸಲ್ಲುತ್ತದೆ. 19.10.1952ರಂದು ಜನಿಸಿದ ಇವರು ಅನ್ನ, ನೀರು, ಗಾಳಿಯಷ್ಟೇ ಬದುಕಿನ ಅವಿಭಾಜ್ಯ ಅಂಗ ಎನ್ನುವಂತಿದ್ದ ಸಂಗೀತ ವಾತಾವರಣದಲ್ಲಿ ಬೆಳೆದ ಕನ್ನಡದ 'ಹಾಡು ಹಕ್ಕಿ'. ತಂದೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ದಿಗ್ಗಜ ಆರ್.ಕೆ. ಶ್ರೀಕಂಠನ್ ಅವರಾದರೆ ದೊಡ್ಡಪ್ಪ ಆರ್.ಕೆ. ವೆಂಕಟರಾಮಶಾಸ್ತ್ರಿಗಳು ಬಹುದೊಡ್ಡ ಪಿಟೀಲು ವಿದ್ವಾಂಸರು. ಹೀಗಾಗಿ ಶುದ್ಧ ಶಾಸ್ತ್ರೀಯ ಸಂಗೀತದ ಬುನಾದಿ ಅವರ ಕಲಾಜೀವನಕ್ಕೆ ಸಹಜವಾಗಿ ದೊರಕಿತು. ಚಿತ್ರಸಂಗೀತದ ವಿಶೇಷ ಆಕರ್ಷಣೆ, ಲತಾ ಮಂಗೇಶ್ಕರ್ ಹಾಗೂ ಆಶಾ ಭೋನ್ಸ್ಲೆಯವರ ಪ್ರಭಾವ, 'ಸಂಗೀತ ಯಾವ ಪ್ರಕಾರದ್ದೇ ಆದರೂ ನಿರಂತರ ಸಾಧನೆಯಿಂದ ಸಿದ್ಧಿ ಸಾಧ್ಯ' ಎಂಬ ತಂದೆಯ ಮಾತಿನಿಂದ ಅವರ ಸುಗಮ ಸಂಗೀತದ ಹಾದಿ ಸುಗಮವಾಯಿತು.

ರಾಷ್ಟ್ರಮಟ್ಟದ ಸುಗಮ ಸಂಗೀತ ಹಾಗೂ ದೇವರ ನಾಮಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಆಕಾಶವಾಣಿಯಲ್ಲಿ ಪಡೆದುಕೊಂಡ ಪುರಸ್ಕಾರದಿಂದಾಗಿ ಸುಗಮ ಸಂಗೀತ ಕ್ಷೇತ್ರವನ್ನೇ ತಮ್ಮ ಸಾಧನಾಕ್ಷೇತ್ರವಾಗಿಸಿಕೊಂಡ ಶ್ರೀಮತಿ ರತ್ನಮಾಲಾ ಮುಂದೆ ಕನ್ನಡದ ಪ್ರತಿಷ್ಠಿತ ಸಂಗೀತ ನಿರ್ದೇಶಕರುಗಳಾದ; ವಿದ್ವಾನ್ ಹೆಚ್.ಕೆ. ನಾರಾಯಣ, ಎಂ. ರಂಗರಾವ್, ರಾಜನ್-ನಾಗೇಂದ್ರ, ಉಪೇಂದ್ರ ಕುಮಾರ್, ವಿಜಯಭಾಸ್ಕರ್, ಪದ್ಮಚರಣ್, ಮೈಸೂರು ಅನಂತಸ್ವಾಮಿ, ಸಿ. ಅಶ್ವಥ್, ಬಿ.ವಿ. ಶ್ರೀನಿವಾಸ್ ಮೊದಲಾದ ಪ್ರತಿಷ್ಠಿತ ಸಂಗೀತ ನಿರ್ದೇಶಕರುಗಳೊಂದಿಗೆ ನೂರಾರು ಗೀತೆಗಳನ್ನು ಹಾಡಿ ಜನಪ್ರಿಯರಾದರು.

ಮೈಸೂರು ಅನಂತಸ್ವಾಮಿಯವರ ನಿರ್ದೇಶನದಲ್ಲಿ ಹೊರಬಂದ ಕನ್ನಡದ ಮೊಟ್ಟಮೊದಲ ಕ್ಯಾಸೆಟ್ 'ನಿತ್ಯೋತ್ಸವ' ದಿಂದಾಗಿ ಹೊಸ ಆಯಾಮವನ್ನು ಪಡೆದುಕೊಂಡ ಶ್ರೀಮತಿಯವರು ಮುಂದೆ ಮೈಸೂರು ಮಲ್ಲಿಗೆ, ಭಾವಸಂಗಮ, ವಾಸಂತಿ, ರೂಪಸಿ, ಪ್ರೇಮಧಾರೆ, ಬಾರೋ ವಸಂತ ಮೊದಲಾಗಿ ನೂರಾರು ಕ್ಯಾಸೆಟ್‌ಗಳಲ್ಲಿ ಭಾವಗೀತೆಗಳು, ಭಕ್ತಿಗೀತೆಗಳು, ವಚನ ಗಾಯನ, ಜನಪದ ಗೀತೆಗಳು, ಹರಿದಾಸರ ದೇವರ

ನಾಮುಗಳನ್ನು ಹಾಡಿ ಅಪಾರ ಪ್ರಸಿದ್ಧಿ ಪಡೆದರು. ಈ ಮಧ್ಯೆ ಪ್ರಭಾತ್ ಕಲಾವಿದರ ಹಲವಾರು ನೃತ್ಯರೂಪಕಗಳಲ್ಲೂ ಹಾಡಿದ ಹಿರಿಮೆ ಇವರದು.

ಸೋಮನಾಥಪುರದ ಶಿಲ್ಪವೈಭವದ ಬಗ್ಗೆ ದೂರದರ್ಶನ ನಿರ್ಮಿಸಿದ 'Nector in Stone' ಹೊಸ ಸಂಚಲನವನ್ನೇ ಮೂಡಿಸಿತು. ಪದ್ಮಚರಣ್ ಅವರ ನಿರ್ದೇಶನದಲ್ಲಿ ರತ್ನಮಾಲಾ ಅವರು ಹಾಡಿದ ಹಾಡುಗಳು ಅಂತರಾಷ್ಟ್ರೀಯ ಖ್ಯಾತಿಯ ಸಿತಾರ್ ಕಲಾವಿದ ಪಂಡಿತ್ ರವಿಶಂಕರ್ ಅವರ ಗಮನ ಸೆಳೆದು 1989ರಲ್ಲಿ ರಷ್ಯಾದಲ್ಲಿ ನಡೆದ 'ಭಾರತೀಯ ಉತ್ಸವ'ದಲ್ಲಿ ಕನ್ನಡ ಗಾಯಕಿಯ ಅಭಿಜಾತ ಪ್ರತಿಭೆಯನ್ನು ಅನಾವರಣಗೊಳಿಸಿದ್ದೊಂದು ಮಹತ್ತರ ದಾಖಲೆಯಾಯಿತು.

ಪುರಂದರದಾಸರ ದೇವರ ನಾಮುಗಳು, ಬಸವಣ್ಣ ಮತ್ತು ಅಕ್ಕಮಹಾದೇವಿಯವರ ವಚನಗಳು, ಬಿ.ವಿ.ಕಾರಂತ, ಬಿ.ಜಯಶ್ರೀ ಅವರ ನಾಟಕಗಳು, ಮುಂತಾಗಿ ಹಲವು ಪ್ರದರ್ಶನ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರಕಾಶಿಸಿರುವ ರತ್ನಮಾಲಾ, ಬಿ.ವಿ.ಕಾರಂತರ 'ಋಷ್ಯಶೃಂಗ' ಮತ್ತು ಚಂದ್ರಶೇಖರ ಕಂಬಾರರ 'ಕರಿಮಾಯಿ' ಚಿತ್ರಗಳ ಮೂಲಕ ಚಿತ್ರಗೀತೆಗಳನ್ನು ಹಾಡಲಾರಂಭಿಸಿ ಮುಂದೆ ಡಾ. ರಾಜಕುಮಾರ್, ಡಾ. ಜೇಸುದಾಸ್ ಮತ್ತು ಡಾ. ಎಸ್.ಪಿ. ಬಾಲಸುಬ್ರಮಣ್ಯಂ ಅವರುಗಳೊಂದಿಗೂ ಹಾಡುವಂತಾದದ್ದು ಅವರ ಪ್ರತಿಭೆಗೆ ಸಾಕ್ಷಿ.

ಅಮೇರಿಕಾ, ಇಂಗ್ಲೆಂಡ್, ಸಿಂಗಾಪುರ್, ಬೆಹರಿನ್, ಕುವೈತ್, ಅಬುದಾಬಿ, ದುಬೈ ಸೇರಿದಂತೆ ಹಲವಾರು ರಾಷ್ಟ್ರಗಳಲ್ಲಿ ಕನ್ನಡದ ಇನಿದನಿಯನ್ನು ಪ್ರವಹಿಸಿ ಬಂದಿರುವ ನಾಡಿನ ಒಬ್ಬ ಪ್ರಬುದ್ಧ, ಪ್ರಸಿದ್ಧ ಪ್ರತಿಭೆಯಾಗಿರುವ ರತ್ನಮಾಲಾ ಕಳೆದ 35 ವರ್ಷಗಳಲ್ಲಿ ಹಾಡದೇ ಇರುವ ಸಂಗೀತ ಪ್ರಕಾರವೇ ಇಲ್ಲ. ತಮ್ಮ ಸಂಗೀತ ಸಾಧನೆಗಾಗಿ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವಾರು ರಾಜ್ಯ ಹಾಗು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ಅಪ್ರತಿಮ ಪ್ರತಿಭೆಯ ಆದರ್ಶ ಗಾಯಕಿಯ ಸುಗಮ ಸಂಗೀತ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ ಇದೀಗ ನಮ್ಮ ಪ್ರತಿಷ್ಠಾನದಿಂದ 'ಸಂಸ್ಕೃತಿ ಸಂಗಮ-2016' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಶ್ರೀಮತಿ ರತ್ನಮಾಲಾ ಪ್ರಕಾಶ್ ಅವರ ಸಂಗೀತ ಸೇವೆಯಿಂದ ಕನ್ನಡ ಸುಗಮ ಸಂಗೀತಕ್ಷೇತ್ರ ಮತ್ತಷ್ಟು ಸಮೃದ್ಧವಾಗಲಿ ಎಂದು ಹಾರೈಸುತ್ತಾ ಅವರಿಗೂ ಮತ್ತು ಅವರ ಕುಟುಂಬ ವರ್ಗಕ್ಕೆ ಶುಭವನ್ನು ಕೋರುತ್ತೇವೆ.

●

## ಸಂಸ್ಕೃತಿ ಸಂಗಮ-2015 ಪ್ರಶಸ್ತಿ ಪ್ರದಾನ ಸಮಾರಂಭ 5.3.2015









ಚಿತ್ರದಲ್ಲಿ ಪರಮಪೂಜ್ಯರಾದ ಸುತ್ತೂರು ಶ್ರೀ ಜಗದ್ಗುರು ಶಿವರಾತ್ರಿದೇಶೀಕೇಂದ್ರ ಮಹಾ ಸ್ವಾಮಿಗಳು, ನಾಡೋಜ ಡಾ. ಚಂದ್ರಶೇಖರ ಕಂಬಾರರು, ಮಾಜಿ ಕೇಂದ್ರ ಸಚಿವ ಎಂ.ವಿ. ರಾಜಶೇಖರನ್, ಪ್ರೊ. ಮಲ್ಲೇಪುರಂ ವೆಂಕಟೇಶ್, ಪ್ರಶಸ್ತಿ ಪುರಸ್ಕೃತರು ಮತ್ತು ಪ್ರತಿಷ್ಠಾನದ ಡಾ. ಸಿ. ಸೋಮಶೇಖರ್ ಮತ್ತು ಸರ್ವಮಂಗಳ ಸೋಮಶೇಖರ ಅವರನ್ನು ಕಾಣಬಹುದು.



## ಡಾ. ಸಿ. ಸೋಮಶೇಖರ – ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ(ರಿ), ಬೆಂಗಳೂರು

### ಪ್ರಮುಖ ಧ್ಯೇಯೋದ್ದೇಶಗಳು

- ನಾಡಿನ ಮತ್ತು ವಿಶ್ವದ ಸಾಹಿತ್ಯ ಸಂಪತ್ತನ್ನು ಸಮೃದ್ಧಗೊಳಿಸಿರುವ ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿ ಬಹುಮುಖ ಸೇವೆ ಸಲ್ಲಿಸಿರುವ ಹಾಗೂ ಈ ಎಲ್ಲಾ ಸಾಹಿತ್ಯ ಪ್ರಕಾರಗಳ ಸಾಹಿತ್ಯ ಸೊಬಗನ್ನು ಜನಮಾನಸಕ್ಕೆ ಪರಿಚಯಿಸುವ ಸಂಗೀತ ಕ್ಷೇತ್ರದ ಸಾಧಕರುಗಳನ್ನು ಗುರುತಿಸಿ ಪ್ರತಿವರ್ಷ 'ಸಂಸ್ಕೃತಿ ಸಂಗಮ' ಪುರಸ್ಕಾರವನ್ನು ನೀಡಿ ಗೌರವಿಸುವುದು.
- ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ವಿವಿಧ ಗೋಷ್ಠಿಗಳನ್ನು, ಸಮಾರಂಭಗಳನ್ನು, ಸಮ್ಮೇಳನಗಳನ್ನು ರಾಜ್ಯದಾದ್ಯಂತ ಏರ್ಪಡಿಸುವುದು.
- ಜಾತ್ಯಾತೀತ ಪರಿಕಲ್ಪನೆಯಡಿಯಲ್ಲಿ ಎಲ್ಲ ಧರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನು ವಿವಿಧ ಭಾಷೆಗಳಲ್ಲಿ ಪ್ರಕಟಿಸುವುದು ಹಾಗೂ ಇಂತಹ ಪ್ರಕಟಣೆಗಳಿಗಾಗಿ ಗ್ರಂಥಕರ್ತರುಗಳಿಗೆ ಅಗತ್ಯವಾದ ಪ್ರೋತ್ಸಾಹ ನೀಡುವುದು.
- ಶೈಕ್ಷಣಿಕ ಕ್ಷೇತ್ರದ ಸಾಧನೆಗಾಗಿ ವಿವಿಧ ರೀತಿಯಲ್ಲಿ ಪ್ರೋತ್ಸಾಹಿಸುವ ಮೂಲಕ ಸುಭದ್ರ ಸುಶಿಕ್ಷಿತ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸುವುದು.
- ಜನಮುಖಿಯಾದ ಸಾಮಾಜಿಕ ಸೇವಾ ಕಾರ್ಯಗಳನ್ನು ಕೈಗೊಂಡು ಸಮಾಜದಲ್ಲಿ ಸೌಹಾರ್ದತೆ, ಸಹಬಾಳ್ವೆ, ಸಹೋದರತ್ವ ಭಾವಗಳನ್ನು ಮೂಡಿಸುವ ವಿಸ್ತೃತ ಸೇವಾ ಯೋಜನೆಗಳನ್ನು ಕಾಲಕಾಲಕ್ಕೆ ರೂಪಿಸಿ ಅನುಷ್ಠಾನಗೊಳಿಸುವುದು.

ಪ್ರತಿಷ್ಠಾನದ ಅಧ್ಯಕ್ಷರು<br>
**ಡಾ. ಸಿ. ಸೋಮಶೇಖರ, ಐಎಎಸ್ (ನಿ)**<br>
ಬೆಂಗಳೂರು

# ವಚನ ಸಾಹಿತ್ಯ

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ಕೂಡಲ ಸಂಗಮ ದೇವರ ಒಲಿಸುವ ಪರಿ!

**– ಬಸವಣ್ಣ**

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ,
ಅವು ಜಗಕ್ಕಿಕ್ಕಿದ ವಿಧಿ.
ನಿನ್ನ ಒಡವೆ ಎಂಬುದು ಜ್ಞಾನರತ್ನ,
ಅಂತಪ್ಪ ದಿವ್ಯರತ್ನವ ಕೆಡಗುಡದೆ
ಆ ರತ್ನವ ನೀನು ಅಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ, ಎಲೆ ಮನವೆ.

**– ಅಲ್ಲಮಪ್ರಭು**

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ?

**– ಅಕ್ಕಮಹಾದೇವಿ**